**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :12 ಸಿಡಬ್ಲು :15

ಸಾಕ್ಷಿಯ ಹೆಸರು : ಶ್ರೀ. ಸಾಬು ಮಾಳಿ

ತಂದೆಯ ಹೆಸರು : ಶ್ರೀ. ಗುರುಬಸಪ್ಪ ಮಾಳಿ

ವಯಸ್ಸು : 57 ವರ್ಷ

ಉದ್ಯೋಗ : ವ್ಯವಸಾಯ

ವಾಸ್ತವ್ಯ : ಸುಟ್ಟಟ್ಟಿ ಗ್ರಾಮ, ತಾಲೂಕುಃ ಅಥಣಿ

ದಿನಾಂಕ : 02-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 7 ರಿಂದ ಚಾಸಾಃ 14 ಮತ್ತು ಚಾಸಾಃ16 ನಮ್ಮ ಊರಿನವರು. ಆರೋಪಿತರು ನನ್ನ ಸೋದರ ಸಂಬಂಧಿಕರು. ಆರೋಪಿತರ ಮತ್ತು ಚಾಸಾಃ 8 ಸುರೇಶ ಗಾಡಿವಡ್ಡರ ಇವರ ನಡುವೆ ಯಾವ ವಿಚಾರವಾಗಿ ಜಗಳ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ದಿನಾಂಕಃ 14-09-2022 ರಂದು ಸಂಜೆ 06:00 ಗಂಟೆ ಸುಮಾರಿಗೆ ನಾನು ಮತ್ತು ನಮ್ಮೂರ ಚಾಸಾಃ 14 ಹನಮಂತ ಅರ್ಥಾವುರ ಇಬ್ಬರೂ ಕೂಡಿಕೊಂಡು ನಮ್ಮ ಹೊಟೇಲದಲ್ಲಿ ಇದ್ದಾಗ 1 ಮತ್ತು 2 ನೇ ಆರೋಪಿತರು ಕೂಡಿಕೊಂಡು ತಮ್ಮ HF Delux ಕಂಪನಿ ಮೋಟಾರ ಸೈಕಲ ನಂಬರ KA-23/ED-2832 ಇದರಲ್ಲಿ ನಮ್ಮೂರ ಸುರೇಶ ಹನಮಂತ ಗಾಡಿವಡ್ಡರ ಇತನಿಗೆ ಕರೆದುಕೊಂಡು ತಮ್ಮ ಮನೆಗೆ ಕಡೆಗೆ ಹೋಗಿರುತ್ತಾರೆ ಎಂದು ಗೊತ್ತಾಗಿ ನಾನು ಮತ್ತು ಹನಮಂತ ಅರ್ಥಾವುರ ಇಬ್ಬರೂ ಕೂಡಿಕೊಂಡು ಚಾಸಾಃ 14 ರವರ ಏರ್ಟಿಗಾ ಕಾರ ನಂಬರ KA-71/0791 ತೆಗೆದುಕೊಂಡು, ಮಲ್ಲಪ್ಪ ಮಾಳಿ ಇವರ ಮನೆ ಹತ್ತಿರ ಸಾಯಂಕಾಲ 06:30 ಗಂಟೆ ಸುಮಾರಿಗೆ ಹೋದಾಗ ಸುರೇಶ ಗಾಡಿವಡ್ಡರ ಇವನಿಗೆ ಅವರ ಜಮೀನಿನಲ್ಲಿದ್ದ ಬಾವಿಯ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ ಎಂದು ಗೊತ್ತಾಗಿ, ಬಾವಿ ಹತ್ತಿರ ಹೋಗಿ ನೋಡಲಾಗಿ, ಸುರೇಶ ಹನಮಂತ ಗಾಡಿವಡ್ಡರ ಮತ್ತು ಮಲ್ಲಪ್ಪ ಯಮನಪ್ಪ ಮಾದರ ( ಚಾಸಾಃ 8 ಮತ್ತು ಚಾಸಾಃ 13) ಅವರಿಬ್ಬರೂ ಅಲ್ಲಿ ಇದ್ದರು, ಸುರೇಶನಿಗೆ ಕರೆಂಟ್ ಮೋಟಾರ ಕೇಬಲ್ ವಾಯರ್ ನಿಂದ ಹೊಡೆಯುತ್ತಿದ್ದರು, ನಾನು ಅವರಿಗೆ ವಿಚಾರಿಸಿದಾಗ, ಅವರ ತಂಗಿ ರಾಜಶ್ರೀ ಅವರ ಮೊಬೈಲ್ ನಂಬರನ್ನು ಮಲ್ಲಪ್ಪ ಕೊಟ್ಟಿರುತ್ತಾನೆ ಎಂದು, ಸುರೇಶ ಇವನು ತಮ್ಮ ತಂಗಿಗೆ ಮೇಲಿಂದ ಮೇಲೆ ಫೋನ್ ಮಾಡುತ್ತಾ ಇರುತ್ತಾನೆ, ಮಾಡಬೇಡಾ ಎಂದು ಹೇಳಿದ್ದರು ಕೇಳುವುದಿಲ್ಲ ಎಂದು ಹೇಳಿ, ಮಲ್ಲಪ್ಪ ಮಾದರ ಇತನಿಗೆ ಸಹ ಅದೇ ವಾಯರ್ ನಿಂದ ಹೊಡೆಯುತ್ತಿದ್ದರು, ನಾವು ಮಲ್ಲಪ್ಪ ಮಾದರನಿಗೆ ಬಿಡಿಸಿ ಕಳುಹಿಸಿ ಕೊಟ್ಟೆವು, ಸುರೇಶ ಗಾಡಿವಡ್ಡರ ಇವನಿಗೆ ನಮ್ಮ ಕಾರ ಗಾಡಿನಿಂದ ಕರೆದುಕೊಂಡು ಮಲ್ಲಪ್ಪ ಮಾದರ ಇವರ ಮನೆ ಹತ್ತಿರ ಬಂದಾಗ ಅಲ್ಲಿ ರಾಜು ಗಾಡಿವಡ್ಡರ ಕುಳಿತ್ತಿದ್ದನು, ನಾವು ಸುರೇಶ ಗಾಡಿವಡ್ಡರನನ್ನು ಕೆಳಗೆ ಇಳಿಸಿದೇವು , ನಂತರ ಅವರ ಮನೆ ಕಡೆಗೆ ಜನರು ಬಂದರು ನಾವು ಅವರಿಗೆ ಮತ್ತು ರಾಜು ವಡ್ಡರ

ಇವರಿಗೆ ಕಳುಹಿಸಿ ಕೊಟ್ಟೆವು ಎಂದು ಹೇಳಿರುತ್ತೇವೆ. " ಎಂದು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ–25 ಎಂದು ಗುರುತಿಸಲಾಯಿತು.

2. ನಾನು ನಿಪಿ–25 ರಂತೆ ಹೇಳಿಕೆ ನೀಡಿದ್ದರೂ ಸಹ, ಆರೋಪಿತರು ನಮ್ಮ ಸಂಬಂಧಿಕರು ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಸ್. ಎ. ಹೆಚ್ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.